149

# ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 7 ಎಂಆರ್ಆರ್ 2004

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ: 28.07.2005

## ಸುತ್ತೋಲೆ

ವಿಷಯ: ಭೂಮಿ- ದೋಷಪೂರಿತ ಪಹಣಿಗಳನ್ನು ಸರಿಪಡಿಸುವುದಕ್ಕೆ ಶುಲ್ಕ ವಸೂಲು ಮಾಡುತ್ತಿರುವುದರ ಬಗ್ಗೆ.

ಉಲ್ಲೇಖ: ಸರ್ಕಾರದ ಸುತ್ತೋಲೆ ನಂ. ಕಂಇ.62.ಎಂಆರ್ ಆರ್ 2000 ದಿನಾಂಕ:22-07-2002

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದಲ್ಲಿ ಕಾಣಿಸಿರುವ ಸುತ್ತೋಲೆಯತ್ತ ಗಮನ ಹರಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳನ್ನೂ ಕೋರಲಾಗಿದೆ. ಭೂ ದಾಖಲೆಗಳ ಗಣಕೀಕರಣದ ಸಂದರ್ಭದಲ್ಲಿ, ಡ್ಯಾಟಾ ಎಂಟ್ರಿ ಮಾಡುವಾಗ ಉಂಟಾಗಿರಬಹುದಾದ ದೋಷಗಳನ್ನು ಸರಿಪಡಿಸುವುದಕ್ಕೆ ಹೆಚ್ಚುವರಿ ಶುಲ್ಕವನ್ನು ಸಾರ್ವಜನಿಕರಿಂದ ಪಡೆಯಬಾರದೆಂದು ಸ್ಪಷ್ಟ ಮತ್ತು ಖಚಿತ ಸೂಚನೆಗಳನ್ನು ಮೇಲ್ಕಂಡ ಸುತ್ತೋಲೆ ಮೂಲಕ ನೀಡಲಾಗಿದೆ. ಆದಾಗ್ಯೂ ಸಹ, ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕು ಕಛೇರಿಯಲ್ಲಿ, ದೋಷಪೂರಿತ ಪಹಣಿಗಳನ್ನು ಸರಿಪಡಿಸಲು ಶುಲ್ಕ ಪಾವತಿಸಬೇಕಾಗಿದೆಯೆಂಬ ಬಗ್ಗೆ ವಿಧಾನಸಭೆಯ ಚುಕ್ಕೆ ಗುರುತಿನ ಪ್ರಶ್ನೆಯಲ್ಲಿ ಪ್ರಸ್ತಾಪಿಸಲಾಗಿದೆ.

ಮಾನ್ಯ ಶ್ರೀ ಅಂಗಾರ ಎಸ್ ವಿಧಾನಸಭಾ ಸದಸ್ಯರು, ಸುಳ್ಯ ಕ್ಷೇತ್ರ, ಇವರ ಚುಕ್ಕೆ ಗುರುತಿನ ಪ್ರಶ್ನೆ ನಂ. 4191 ಕ್ಕೆ ಮಾನ್ಯ ಕಂದಾಯ ಸಚಿವರ ಪರವಾಗಿ ಉತ್ತರಿಸುವಾಗ, ಕರ್ನಾಟಕ ಸರ್ಕಾರದ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಇಲಾಖೆಯ ಮಾನ್ಯ ಸಚಿವರಾದ ಶ್ರೀಯುತ ಪಿ.ಜಿ.ಆರ್ ಸಿಂಧ್ಯ ರವರು, ದೋಷಪೂರಿತ ಪಹಣಿಗಳನ್ನು ಸರಿಪಡಿಸುವುದಕ್ಕೆ ಹೆಚ್ಚುವರಿ ಶುಲ್ಕ ವಸೂಲು ಮಾಡಬಾರದೆಂದೂ, ಪಹಣಿ ಪತ್ರಿಕೆಗಳಲ್ಲಿ ದೋಷಗಳಿದ್ದಲ್ಲಿ, ಅವುಗಳನ್ನು ಅತಿ ಜರೂರಾಗಿ, ಆದ್ಯತೆ ಮೇರೆಗೆ ಸರಿಪಡಿಸಿಕೊಡಬೇಕೆಂದೂ ಸೂಚಿಸಿರುತ್ತಾರೆ.

ಆದುದರಿಂದ ಸರ್ಕಾರವು, ಉಲ್ಲೇಖದಲ್ಲಿ ಕಾಣಿಸಿರುವ ಸುತ್ತೋಲೆಯಲ್ಲಿ ತಿಳಿಸಲಾಗಿರುವ ಅಂಶಗಳನ್ನು ಪುನರುಚ್ಚರಿಸುತ್ತಾ, ಈ ಬಗ್ಗೆ ಯಾವುದೇ ದೂರುಗಳಿಗೆ ಅವಕಾಶ ನೀಡದಂತೆ ಮತ್ತು ಸಾರ್ವಜನಿಕರಿಗೆ ಅನಾನುಕೂಲವಾಗದಂತೆ ಸೂಕ್ತ ಕ್ರಮ ಕೈಗೊಳ್ಳುವಂತೆ ಎಲ್ಲಾ ತಹಸೀಲ್ದಾರರಿಗೆ ಸೂಚಿಸುವಂತೆ ಕೋರಿದೆ.

ಈ ಸುತ್ತೋಲೆಯು ಕಂದಾಯ ಇಲಾಖೆಯ ಇಂಟರ್ ನೆಟ್ ಸೈಟ್ http://www.bhoomi.kar.nic.in ನಲ್ಲಿ ಲಭ್ಯವಿರುತ್ತದೆ

ಜಿಲ್ಲಾಧಿಕಾರಿಗಳವರ ಕಛೇರಿ
ಹಾಸನ ಜಿಲ್ಲೆ, ಹಾಸನ.
ದಿನಾಂಕ ..........................

13/8/05

(ರಾಜೀವ್ ಚಾವ್ಲಾ)
ಸರ್ಕಾರದ ವಿಶೇಷ ಕಾರ್ಯದರ್ಶಿ(ಭೂಮಿ)
ಕಂದಾಯ ಇಲಾಖೆ

ಇವರಿಗೆ,
ಎಲ್ಲಾ ಜಿಲ್ಲಾಧಿಕಾರಿಗಳು.

ಜಿಲ್ಲಾಧಿಕಾರಿಗಳ ಪರವಾಗಿ
ಹಾಸನ ಜಿಲ್ಲೆ, ಹಾಸನ